**ಸಾಕ್ಷಿಯನ್ನು ದಿಃ *21/01/2026* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು ಃ ಶ್ರೀ ಪಿಸಿಜಿ ವಕೀಲರಿಂದ 2 ನೇ ಎದುರುದಾರರ ಪರವಾಗಿ.**

ನಾನು ಸದರಿ ಪ್ರಕರಣವನ್ನು ಯಾರ ವಿರುದ್ದ ಸಲ್ಲಿಸಿರುತ್ತೇನೆ ಎಂದು ಹೇಳಲು ಬರುವುದಿಲ್ಲ, ಆದರೆ ವಿಮೆ ಕಂಪನಿಯ ಮೇಲೆ ಮಾಡಿರುತ್ತೇನೆ. ಎದುರುದಾರ ನಂ.3 ಮತ್ತು 4 ನನ್ನ ಅತ್ತೆ ಮತ್ತು ಮಾವ. ಸದರಿಯವರು ಬೈಲಹೊಂಗಲದಲ್ಲಿ ವಾಸ ಮಾಡುತ್ತಾರೆ ಎಂದರೆ ನಿಜ. ನನ್ನ ಅತ್ತೆ ಮಾವನಿಗೆ ಇನ್ನೊಬ್ಬ ಮಗನಿದ್ದು, ಅವರು ನನ್ನ ಮೃತ ಪತಿಯ ಅಣ್ಣನಾಗಬೇಕು. ನನ್ನ ಪತಿಯ ಸಹೋದರಿಯ ಹೆಸರು ಗಂಗಾ. ಸದರಿ ನನ್ನ ಗಂಡನ ಅಣ್ಣ ಪ್ರದೀಪ ಮತ್ತು ಗಂಗಾ ಇವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ನಿಜ. ಸದರಿಯವರೆಲ್ಲರೂ ಇದೇ ರೀತಿ ಪ್ರಕರಣವನ್ನು ಬೈಲಹೊಂಗಲ ನ್ಯಾಯಾಲಯದಲ್ಲಿ ಹೂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈ ಹೇಳಿಕೆಯನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಪ್ರಸ್ತುತ ನನ್ನ ತವರುಮನೆಯಾದ ಹೆಬ್ಬಾಳ ಗ್ರಾಮದಲ್ಲಿರುತ್ತೇನೆ. ನನ್ನ ಅರ್ಜಿಯಲ್ಲಿ ನಾನು ಗೋವನಕೊಪ್ಪ ಗ್ರಾಮದಲ್ಲಿ ವಾಸವಿರುತ್ತೇನೆ ಎಂದು ಬರೆದುಕೊಂಡಿದ್ದು ಸುಳ್ಳು ಇರುತ್ತದೆ. 2 ನೇ ಎದುರುದಾರ ವಿಮೆ ಕಂಪನಿಯ ಕಚೇರಿ ಸಹ ಧಾರವಾಡದಲ್ಲಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ.

ಅಪಘಾತವು ಹಿರಿಯೂರನಲ್ಲಿ ಆಗಿರುತ್ತದೆ. ಆದ್ದರಿಂದ ಸದರಿ ಪ್ರಕರಣ ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಬರುವುದಿಲ್ಲ, ಆದ್ದರಿಂದ ನಾನು ಹೂಡಿರುವ ಅರ್ಜಿ ಊರ್ಜಿತವಲ್ಲ ಎಂದರೆ ಸರಿಯಲ್ಲ.

***ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲು ಎದುರುದಾರರ ಪರ ವಕೀಲರ ಮನವಿಯ ಮೇರೆಗೆ ಮುಂದೂಡಲಾಯಿತು.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,
ಧಾರವಾಡ.